ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
**ADIKAVI SRI MAHARSHI VALMIKI UNIVERSITY, RAICHUR**
Krishna Tunga Campus, MantralayRoad(N.H. 167),Yergera -584133, Raichur,Karnataka
ಪರೀಕ್ಷಾ ವಿಭಾಗ
Email: registrarevrur@gmail.com

ಸಂಖ್ಯೆ: ಅಶ್ರೀಮವಾವಿರಾ/ಪರೀಕ್ಷಾ/ಬಿ.ಎಡ್/I &III/2026-27/ 116 ದಿನಾಂಕ: 08/05/26

**ಪರೀಕ್ಷಾ ಅಧಿಸೂಚನೆ**

ವಿಷಯ:- 2025-26 ನೇ ಸಾಲಿನಲ್ಲಿ ಜರುಗುವ ಸ್ನಾತಕ ಬಿ.ಎಡ್ ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ನ (ರೆಗ್ಯುಲರ್/ರಿಪೀಟರ್ಸ್) ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು.

ಉಲ್ಲೇಖ:-ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:29.04.2026

*****

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಜೂನ-2026 ನೇ ಸಾಲಿನಲ್ಲಿ ಜರುಗುವ ಸ್ನಾತಕ ಬಿ.ಎಡ್. ಪ್ರಥಮ ಮತ್ತು ತೃತೀಯ ಸೆಮಿಸ್ಟರ್ (ರೆಗ್ಯುಲರ್/ರಿಪೀಟರ್ಸ್) ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಅಧಿಸೂಚನೆಯನ್ನು ಹೊರಡಿಸಲಾಗಿದೆ. 2025-26 ನೇ ಸಾಲಿನ ಪ್ರಥಮ ಮತ್ತು ತೃತೀಯ ಸೆಮಿಸ್ಟರ್ ಪರೀಕ್ಷೆಗಳಿಗೆ UUCMS ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು ದಿನಾಂಕಗಳನ್ನು ನಿಗದಿ ಪಡಿಸಿ ಅಧಿಸೂಚನೆ ಹೊರಡಿಸಲಾಗಿದೆ.

**ಪರೀಕ್ಷಾ ಶುಲ್ಕ, ಅಂಕಪಟ್ಟಿ ಶುಲ್ಕ, ಅರ್ಜಿ ತಪಾಸಣಾ ಶುಲ್ಕ ಹಾಗೂ ಇನ್ನಿತರ ಶುಲ್ಕಗಳ ವಿವರಗಳು**

| ಕ್ರ.ಸಂ. | ವಿವರಗಳು | B.Ed I &III Semester |
|---|---|---|
| 1. | ಪರೀಕ್ಷಾ ಶುಲ್ಕ | ರೂ. 1600.00 |
| 2. | ಅರ್ಜಿ ತಪಾಸಣೆ ಶುಲ್ಕ | ರೂ. 10.00 |
| 3. | ಅರ್ಜಿಗಳ ಸಂಸ್ಕರಣಾ ಶುಲ್ಕ | ರೂ. 150.00 |

**ರಿಪೀಟರ್ಸ್ ಪರೀಕ್ಷಾ ಶುಲ್ಕ, ಅಂಕಪಟ್ಟಿ ಶುಲ್ಕ, ಅರ್ಜಿ ತಪಾಸಣಾ ಶುಲ್ಕ ಹಾಗೂ ಇನ್ನಿತರ ಶುಲ್ಕಗಳ ವಿವರಗಳು**

| ಕ್ರ.ಸಂ. | ವಿವರಗಳು | B.Ed I & III Semester |
|---|---|---|
| 1 | ಅರ್ಜಿ ಸಂಸ್ಕರಣಾಶುಲ್ಕ | ರೂ.150.00 |
| 2 | ಒಂದು ಪತ್ರಿಕೆಗೆ | ರೂ.250.00 |
| 3 | ಎರಡು ಪತ್ರಿಕೆಗೆ | ರೂ.500.00 |
| 4 | ಮೂರು ಅಥವಾ ಮೂರಕ್ಕಿಂತ ಹೆಚ್ಚು ಪತ್ರಿಕೆಗಳಿಗೆ (ಪೂರ್ಣ ಶುಲ್ಕ) | ರೂ.1600.00 |

**ಪರೀಕ್ಷಾ ಶುಲ್ಕ ಮತ್ತು ಇನ್ನಿತರ ಶುಲ್ಕಗಳ ದಿನಾಂಕಗಳ ವಿವರಗಳು**

| ಕ್ರ.ಸಂ. | ವಿವರಗಳು | ದಿನಾಂಕ |
|---|---|---|
| 1. | UUCMS ನಲ್ಲಿ I & III ಸೆಮಿಸ್ಟರ್ ಕೋರ್ಸ ರೆಜಿಸ್ಟ್ರೇಷನ್ (Course Registration) ಮಾಡಿಕೊಳ್ಳುವ ಕೊನೆಯ ದಿನಾಂಕ | 15.05.2026 |
| 2. | UUCMS ನಲ್ಲಿ ಪ್ರಾಂಶುಪಾಲರುಗಳು ಕೋರ್ಸ ರೆಜಿಸ್ಟ್ರೇಷನ್(Course Registration) approve ಮಾಡುವ ಕೊನೆಯ ದಿನಾಂಕ | 16.05.2026 |
| 3. | ವಿದ್ಯಾರ್ಥಿಗಳು UUCMS ಪೋರ್ಟಲ್‌ನಲ್ಲಿ ಪರೀಕ್ಷಾ ಶುಲ್ಕದೊಂದಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ (ದಂಡ ರಹಿತ) | 25.05.2026 |

| | | |
|---|---|---|
| 4. | ವಿದ್ಯಾರ್ಥಿಗಳು UUCMSಪೋರ್ಟಲ್‌ನಲ್ಲಿ ಪರೀಕ್ಷಾಶುಲ್ಕದೊಂದಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ (ದಂಡ ಸಹಿತ ರೂ. 100/-) | **27.05.2026** |
| 5. | ವಿದ್ಯಾರ್ಥಿಗಳು UUCMSಪೋರ್ಟಲ್‌ನಲ್ಲಿ ಪರೀಕ್ಷಾ ಶುಲ್ಕದೊಂದಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ (ದಂಡ ಸಹಿತ ರೂ. 750/-) | **30.05.2026** |
| 6. | ಪ್ರಾಂಶುಪಾಲರುಗಳುಪರೀಕ್ಷಾ ಶುಲ್ಕ, ದಂಡ ಶುಲ್ಕದೊಂದಿಗೆ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳ ಮಾಹಿತಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಕೊನೆಯ ದಿನಾಂಕ | **31.05.2026** |
| 7. | ಪ್ರಾಂಶುಪಾಲರುಗಳು ಪರೀಕ್ಷಾ ಶುಲ್ಕ, ದಂಡ ಶುಲ್ಕದೊಂದಿಗೆ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳ ಮಾಹಿತಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ (ಪ್ರತಿ ದಿನ ದಂಡ ಸಹಿತ ರೂ.500 ರೊಂದಿಗೆ) ಸಲ್ಲಿಸುವಕೊನೆಯ ದಿನಾಂಕ | **02.06.2026** |
| 8. | ಪರೀಕ್ಷಾ ಪ್ರವೇಶ ಪತ್ರಗಳನ್ನು **(Hall Ticket) UUCMS**ಮೂಲಕ ಪಡೆಯುವ ದಿನಾಂಕ | **15.06.2026** |
| 9. | ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ | **20.06.2026** |
| 10. | ಆಂತರಿಕ ಅಂಕಗಳನ್ನು ಸಲ್ಲಿಸುವ ಕೊನೆಯ ದಿನಾಂಕ | **15.06.2026** |

**ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ -1, ಪ್ರವರ್ಗ-2 (ಎ), ಪ್ರವರ್ಗ-2(ಬಿ), ಪ್ರವರ್ಗ-3 (ಎ), ಪ್ರವರ್ಗ-3(ಬಿ) ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು, ಪೂರ್ಣ ಪರೀಕ್ಷಾ ಶುಲ್ಕ ಭರಿಸುವುದು. ವೃತ್ತಿಪರ ಕೋರ್ಸುಗಳಿಗೆ ಪರೀಕ್ಷಾ ಶುಲ್ಕ ವಿನಾಯಿಯತಿ ಇರುವುದಿಲ್ಲ.**

**ವಿದ್ಯಾರ್ಥಿಗಳಿಗೆ ಸೂಚನೆಗಳು:**

1. ವಿದ್ಯಾರ್ಥಿಯು ಒಮ್ಮೆ ನೋಂದಣಿ ಮಾಡಲು ಮೊಬೈಲ್ ನಂಬರ್ ಹಾಗೂ ಇ-ಮೇಲ್ ನ್ನು ಬೇರೆ ವಿದ್ಯಾರ್ಥಿಗಳು ಬಳಸುವಂತಿಲ್ಲ.
2. ಪ್ರತಿಯೊಬ್ಬ ವಿದ್ಯಾರ್ಥಿಯು ಪರೀಕ್ಷಾ ಶುಲ್ಕವನ್ನು **ಕಡ್ಡಾಯವಾಗಿ UUCMS ಪೋರ್ಟಲ್ ಮೂಲಕವೇ ಪರೀಕ್ಷಾ ಶುಲ್ಕವನ್ನು ಆನ್‌ಲೈನ್‌ನಲ್ಲಿ ಪಾವತಿಸತಕ್ಕದ್ದು.**
3. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಆನ್‌ಲೈನ್ ಮೂಲಕ ಭರಿಸಿದ ಶುಲ್ಕದ ರಸೀದಿಯೊಂದಿಗೆ/ಚಲನ್‌ದೊಂದಿಗೆ ಪರೀಕ್ಷಾ ಅರ್ಜಿಗಳನ್ನು ಕಾಲೇಜಿನಲ್ಲಿ ಸಲ್ಲಿಸತಕ್ಕದ್ದು.
4. ಪರೀಕ್ಷಾ ಕೇಂದ್ರದ ಬದಲಾವಣೆಗೆ ಯಾವುದೇ ಕಾರಣಕ್ಕೂ ಅವಕಾಶವಿರುವುದಿಲ್ಲ.
5. ಒಮ್ಮೆ ಪಾವತಿಸಲಾದ ಪರೀಕ್ಷಾ ಶುಲ್ಕವನ್ನು ಯಾವ ಕಾರಣಕ್ಕೂ ಮರುಪಾವತಿ ಮಾಡಲಾಗುವುದಿಲ್ಲ ಹಾಗೂ ಅದನ್ನು ಮುಂದಿನ ಪರೀಕ್ಷೆಗಳಿಗೆ ಸರಿದೂಗಿಸಿ ಕೊಳ್ಳಲಾಗುವುದಿಲ್ಲ ಮತ್ತು ಇಂತಹ ವಿಷಯಗಳಿಗೆ ಪತ್ರ ವ್ಯವಹಾರಕ್ಕೆ ಆಸ್ಪದವಿರುವುದಿಲ್ಲ.
6. ಯಾವುದೇ ಪರಿಸ್ಥಿತಿಯಲ್ಲಿ ಅಧಿಸೂಚನೆಯಲ್ಲಿ ನಿಗಧಿಪಡಿಸಿ ತಿಳಿಸಿದ ಕೊನೆಯ ದಿನಾಂಕ ಮುಗಿದ ನಂತರ ಬಂದಂತಹ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಯಾವುದೇ ಕಾರಣಕ್ಕಾಗಿ ಪರೀಕ್ಷೆಗಳು ಮುಂದೂಡಿದಲ್ಲಿ ಶುಲ್ಕ ಪಾವತಿಸುವ ದಿನಾಂಕಗಳು ಬದಲಾವಣೆಯಾಗುವುದಿಲ್ಲ.

**ಪ್ರಾಂಶುಪಾಲರುಗಳಿಗೆ ಸೂಚನೆಗಳು:**

1) ಜೂನ-2026 ರ ಪರೀಕ್ಷಾ ಅರ್ಜಿಗಳನ್ನು ಆನ್‌ಲೈನ್ ಮೂಲಕ ಪಡೆಯಬಹುದಾಗಿದ್ದು, ಹಾಗೂ ಸದರಿ ಚಲನ್‌ಗಳನ್ನು ವಿದ್ಯಾರ್ಥಿಗಳ ಪಟ್ಟಿಯೊಂದಿಗೆ ಪರೀಕ್ಷಾ ವಿಭಾಗಕ್ಕೆ ಸಲ್ಲಿಸಬೇಕು. ಯಾವುದೇ ಕಾರಣಕ್ಕೂ ಪರೀಕ್ಷಾ ವಿಭಾಗದಿಂದ ಮ್ಯಾನುವಲ್ ಪರಿಕ್ಷಾ ಅರ್ಜಿಗಳನ್ನು ನೀಡುವುದಿಲ್ಲ.
2) ಪ್ರಾಂಶುಪಾಲರುಗಳುಆಯಾ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಕಡ್ಡಾಯವಾಗಿ UUCMS ಪೋರ್ಟಲ್ ಮೂಲಕವೆ ಪರೀಕ್ಷಾ ಶುಲ್ಕವನ್ನು ಪಾವತಿಸುವಂತೆ ಕ್ರಮ ಕೈಗೊಳ್ಳಬೇಕು.
3) ಪ್ರಾಂಶುಪಾಲರುಗಳು ಆನ್‌ಲೈನ ಮೂಲಕಭರಿಸಿದ ಶುಲ್ಕದ ರಸೀದಿಯೊಂದಿಗೆ/ಚಲನ್‌ದೊಂದಿಗೆ ಪರೀಕ್ಷಾ ಅರ್ಜಿಗಳ ಮಾಹಿತಿ (ವಿದ್ಯಾರ್ಥಿಗಳ ಪಟ್ಟಿ)ಯನ್ನು ಪರೀಕ್ಷಾ ವಿಭಾಗಕ್ಕೆ **02.06.2026** ರೊಳಗಾಗಿ ಸಲ್ಲಿಸತಕ್ಕದು. ತಪ್ಪಿದಲ್ಲಿ ಪ್ರತಿ ದಿನ ರೂ. 500/- ದಂಡ ವಿಧಿಸಲಾಗುವುದು
4) ಎಲ್ಲಾ **ಬಿ.ಎಡ್** ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ನ(ರೆಗ್ಯುಲರ್/ರಿಪೀಟರ್ಸ್)ಪರೀಕ್ಷೆಗಳಿಗೆ ಹಾಜರಾಗುವ ವಿಷಯವಾರು ಅಭ್ಯರ್ಥಿಗಳ ಸಂಖ್ಯೆ ತೋರಿಸುವ ಪಟ್ಟಿಯನ್ನು ಲಗತ್ತಿಸಬೇಕು.
5) ಕಾಲೇಜಿನ ಪ್ರಾಂಶುಪಾಲರುಗಳು ವಿದ್ಯಾರ್ಥಿಗಳಿಂದ ಅರ್ಜಿ ತಪಾಸಣೆ ಶುಲ್ಕ ರೂ. 10/- ಅನ್ನು ಪಾವತಿಕೊಳ್ಳತಕ್ಕದ್ದು.

6) ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ತಮ್ಮ ಉತ್ತರಗಳನ್ನು ಕೇವಲ ಇಂಗ್ಲೀಷ್ ಇಲ್ಲವೆ ಕನ್ನಡ ಮಾಧ್ಯಮದಲ್ಲಿ ಮಾತ್ರ ಬರೆಯಲು ಅವಕಾಶವಿದೆ. ಉಳಿದ ಭಾಷೆಗಳಲ್ಲಿ ಬರೆಯತಕ್ಕದ್ದಲ್ಲ ಎಂಬುದನ್ನು ಪ್ರಾಂಶುಪಾಲರು ವಿದ್ಯಾರ್ಥಿಗಳ ಗಮನಕ್ಕೆ ತರಬೇಕು. ವಿದ್ಯಾರ್ಥಿಗಳು ಇಂಗ್ಲೀಷ್ ಇಲ್ಲವೆ ಕನ್ನಡ ಮಾಧ್ಯಮದಲ್ಲಿ ಬರೆಯದೇ ಬೇರೆ ಮಾಧ್ಯಮದಲ್ಲಿ ಬರೆದರೆ ಅಂತಹ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು ಮೌಲ್ಯಮಾಪನವಾಗದೇ ಉಳಿಯುತ್ತವೆ. ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶವನ್ನು ಅನೂರ್ಜಿತಗೊಳಿಸಲಾಗುವುದೆಂದು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಬೇಕು. ಇದು ಭಾಷಾ ವಿಷಯಗಳಿಗೆ ಅನ್ವಯವಾಗುವುದಿಲ್ಲ.

7) ಪ್ರಾಂಶುಪಾಲರು ತಮ್ಮ ಕಛೇರಿಯ ಸಿಬ್ಬಂದಿಗಳಿಗೆ ಈ ಅಧಿಸೂಚನೆಯಲ್ಲಿ ತಿಳಿಸಿದ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವ ಹೊಣೆಗಾರಿಗೆ ಅವರದ್ದಾಗಿದೆ ಎಂಬುದು ಮನವರಿಕೆ ಮಾಡಿಕೊಡಲು ಸೂಚಿಸಲಾಗಿದೆ.

8) ಪ್ರಾಂಶುಪಾಲರುಗಳು ಈ ಕೆಳಗೆ ನಮೂದಿಸಿದ ನಮೂನೆಯಲ್ಲಿ ವಿದ್ಯಾರ್ಥಿಗಳ ಮಾಹಿತಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು.

**All B.Ed Courses**

| College Name: | | | | | | | |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| Sl.No. | Name of the Student | Register No. | Category | Demand | Collection | Balance | Remarks |
| | | | | | | | |

8/5/26

ಕುಲಸಚಿವರು (ಮೌಲ್ಯಮಾಪನ)
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು

ಇವರಿಗೆ,
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ವ್ಯಾಪ್ತಿಯ ಸಂಲಗ್ನತೆ ಹೊಂದಿದ ಎಲ್ಲಾ ಬಿ.ಎಡ್. ಹೊಂದಿರುವ ಪದವಿ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

8/5/26

**ಪ್ರತಿಗಳು:**

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರು ಆಪ್ತ ಸಹಾಯಕರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು
2. ನೋಡೆಲ್ ಅಧಿಕಾರಿಗಳು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು
3. ಜಿಲ್ಲಾ ಸಮಾಜಕಲ್ಯಾಣ/ಹಿಂದುಳಿದ ವರ್ಗ ಮತ್ತುಅಲ್ಪಸಂಖ್ಯಾತರ ಇಲಾಖೆಗಳಿಗೆ, ರಾಯಚೂರು
4. ಹಣಕಾಸು ಅಧಿಕಾರಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು
5. ನಿರ್ದೇಶಕರು, ಕಾಲೇಜುಅಭಿವೃದ್ಧಿ ಮಂಡಳಿ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು
6. ಶೈಕ್ಷಣಿಕ ವಿಭಾಗ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು
7. ಕಛೇರಿ ಪ್ರತಿ.